ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆಃ ಕಾಶಿಇ/ಶೈವಿ/22/ಸುತ್ತೋಲೆ/2023-24 ದಿನಾಂಕ: 15.02.2024

# ಸುತ್ತೋಲೆ

ವಿಷಯಃ ಸಂವಿಧಾನ ಜಾಗೃತ ಜಾಥಾ ಹಾಗೂ ಐಕ್ಯತಾ ಸಮಾವೇಶದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು.

ಉಲ್ಲೇಖಃ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು, ರವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಅಮುಕಾ/ಅಆ 48 /2024 ದಿನಾಂಕ:15.02.2024.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಐಟಿಬಿಟಿ ಸಚಿವರ ಅಧ್ಯಕ್ಷತೆಯಲ್ಲಿ ನಿರ್ಣಯಿಸಿದಂತೆ, "ಸಂವಿಧಾನ ಜಾಗೃತಿ ಜಾಥಾ ಹಾಗೂ ಐಕ್ಯತಾ ಸಮಾವೇಶದ" ಕಾರ್ಯಕ್ರಮವನ್ನು ಕಾಲೇಜುಗಳಲ್ಲಿ ಆಯೋಜಿಸುವಂತೆ ಸೂಚಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಸಾರ್ವಜನಿಕ ಆಡಳಿತ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಸಂವಿಧಾನದ ಕುರಿತು ಸಂವಾದವನ್ನು ಆಯೋಜಿಸಿ, ಸಕ್ರಿಯವಾಗಿ ಭಾಗವಹಿಸಲು ಕ್ರಮವಹಿಸುವಂತೆಯೂ ಹಾಗೂ ಪರಿಣಿತ ವಿದ್ಯಾರ್ಥಿಗಳನ್ನು ಗುರುತಿಸಿ, ಅಂತಹವರು ದಿನಾಂಕ:24.02.2024 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಸಂವಿಧಾನ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅಗತ್ಯ ಕ್ರಮ ವಹಿಸುವಂತೆಯೂ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ: 2೩.02.2024ರಂದು ಆಯಾ ಜಂಟಿ ನಿರ್ದೇಶಕರ ಮುಖಾಂತರ ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಅಡಕ: ಕಾರ್ಯಕ್ರಮದ ವಿವರ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

ಇವರಿಗೆ : ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.

1. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
3. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತಶಾಖೆಗೆ, ಕೊಠಡಿ ಸಂಖ್ಯೆ:306, 3ನೇ ಮಹಡಿ, ವಿಧಾನಸೌಧ, ಬೆಂಗಳೂರು-560 001.
2. ಆಯುಕ್ತರ, ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಹೆಚ್ಚುವರಿ ನಿರ್ದೇಶಕರ ಹಾಗೂ ಜಂಟಿ ನಿರ್ದೇಶಕರುಗಳ ಆಪ್ತ ಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
3. ಕಛೇರಿ ಪ್ರತಿ.

ಡಾ: ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಭಿವೃದ್ಧಿ ಆಯುಕ್ತರು

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 306, 3ನೇ ಮಹಡಿ,
ವಿಧಾನಸೌಧ, ಬೆಂಗಳೂರು-560 001
ದೂರವಾಣಿ: 080-22250715, 22033308
ಇ-ಮೇಲ್: devcom@karnataka.gov.in

ಅ. ಸ ಪ ಸಂ: ಅಮುಕಾ ಅಆ: 48 :2024

ದಿನಾಂಕ: 15-02-2024

ಆತ್ಮೀಯ ಶ್ರೀಕರ್ ರವರೆ,

ದಿನಾಂಕ: 12.02.2024 ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಐಟಿಬಿಟಿ ಸಚಿವರ ಜಂಟಿ ಅಧ್ಯಕ್ಷತೆಯ ಸಭೆಯಲ್ಲಿ ಸೂಚಿಸಿದಂತೆ ಎಲ್ಲಾ ವಿಶ್ವವಿದ್ಯಾನಿಲಯಗಳು "ಸಂವಿಧಾನ ಜಾಗೃತಿ ಜಾಥಾ ಹಾಗೂ ಐಕ್ಯತಾ ಸಮಾವೇಶದ" ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಗೂ ಸಾರ್ವಜನಿಕ ಆಡಳಿತ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರದ ವಿದ್ಯಾರ್ಥಿಗಳಿಗೆ ಸಂವಿಧಾನದ ಕುರಿತ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಸಂವಾದವನ್ನು ಆಯೋಜಿಸಲು ಮತ್ತು ಪರಿಣಿತ ವಿದ್ಯಾರ್ಥಿಗಳನ್ನು ಗುರುತಿಸಿ ಅಂತಹವರು ದಿನಾಂಕ: 24.02.2024 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಸಂವಿಧಾನ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ತಿಳಿಸಲು ಕೋರಿದೆ. ಕಾರ್ಯಕ್ರಮದ ವಿವರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಇದರೊಂದಿಗೆ ಲಗತ್ತಿಸಿದೆ.

ಶುಭಾಶಯಗಳೊಂದಿಗೆ

ತಮ್ಮ ವಿಶ್ವಾಸಿ,

ಇವರಿಗೆ:
ಶ್ರೀ ಎಂ. ಎಸ್ ಶ್ರೀಕರ್, ಭಾ.ಆ.ಸೇ,
ಸರ್ಕಾರದ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

# ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತೆ ಬಗ್ಗೆ ಬೃಹತ್ ಅಭಿಯಾನ

ಸಂವಿಧಾನ ಜಾಗೃತಿ ಜಾಥಾವನ್ನು ದಿನಾಂಕ: 26ನೇ ಜನವರಿ 2024 ರಿಂದ 23ನೇ ಫೆಬ್ರುವರಿ 2024 ರವರೆಗೆ ರಾಜ್ಯಾದ್ಯಂತ ಆಚರಿಸಲಾಗುತ್ತಿದ್ದು, ಲೋಕತಂತ್ರದ ಅತಿ ದೊಡ್ಡ ಹಬ್ಬವಾಗಿ ಮೂಡಿ ಬಂದಿದೆ. ಸಂವಿಧಾನ ಕುರಿತ ಸಂವಾದವನ್ನು ದಿನಾಂಕ: 24ನೇ ಹಾಗೂ 25ನೇ ಫೆಬ್ರುವರಿ 2024 ರಂದು ನಡೆಸಲಾಗುವುದು.

ಏತಕ್ಕಾಗಿ ಈ ಕಾರ್ಯಕ್ರಮ ?

ಭಾರತ ಸಂವಿಧಾನವು ದೇಶದ ಎಲ್ಲಾ ವಿದ್ಯಮಾನಗಳಿಗೆ ಮೂಲಾಧಾರವಾಗಿದೆ. ಸಂವಿಧಾನ ರಚನಾ ಸಭೆಯ ಚರ್ಚೆಗಳ ಮೂಲಕ, ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅವಿರತ ಶ್ರಮದಿಂದಾಗಿ ನಮ್ಮ ಸಂವಿಧಾನವು 1949 ರ ಜನವರಿ 26 ರಂದು ಅನುಷ್ಠಾನಕ್ಕೆ ಬಂದಿರುತ್ತದೆ.

ಭಾರತದ ವೈವಿಧ್ಯಮಯವಾದ ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ ಮತ್ತು ನೀತಿ ನಿಯಮಗಳ ಮೇಲೆ ವಿಸ್ತೃತವಾದ ಚರ್ಚೆ ನಡೆದು ಸಂವಿಧಾನ ರಚನಾ ಸಭೆಯಲ್ಲಿ ಇದರ ಕರಡು ಪ್ರತಿಯನ್ನು ಸಿದ್ಧಪಡಿಸಲಾಯಿತು.

ಭಾರತ ಸಂವಿಧಾನದ ಮೂಲತತ್ವವು ಅದರ ಪೀಠಿಕೆಯಾಗಿದೆ. ಇದು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಗಣರಾಜ್ಯದ ಮೌಲ್ಯಗಳಿಗೆ ಅನುಸಾರವಾಗಿ ರೂಪುಗೊಂಡಿದ್ದು, ಇದು ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯವನ್ನು ಖಚಿತಪಡಿಸುತ್ತದೆ ಮತ್ತು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ಆಚರಣೆ ಹಾಗೂ ಅವರ ಸಂಪ್ರದಾಯಗಳನ್ನು ಗೌರವಿಸುತ್ತದೆ.

ಸಂವಿಧಾನದ ಹಾದಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯ, ಸ್ವಾತಂತ್ರ್ಯ, ಘನತೆ, ಐಕ್ಯತಾ ಪ್ರಜ್ಞೆ, ಸಮಗ್ರತೆ, ಧರ್ಮ ನಿರಪೇಕ್ಷತೆ ಮತ್ತು ಸಮಾನತೆಯ ವಾತಾವರಣವನ್ನು ಕಲ್ಪಿಸುವುದು ಸರ್ಕಾರದ (ಕೇಂದ್ರ, ರಾಜ್ಯ ಮತ್ತು ಪ್ರಾಂತ್ಯ) ಕರ್ತವ್ಯವಾಗಿದೆ.

ಅನುಸರಿಸುತ್ತವೆ. ಸರ್ಕಾರ, ಖಾಸಗಿ ವಲಯ ಮತ್ತು ಸಾರ್ವಜನಿಕರಿಂದ ವ್ಯಾಪಕ ಭಾಗವಹಿಸುವಿಕೆ ಇರುತ್ತದೆ. ಅವು ಸೈಕಲ್ ಜಾಥಾಗಳು ಸಹ ಆಗಿರಬಹುದು. ಅದನ್ನು ರೂಪಿಸಿ ನಡೆಸುವ ಜವಾಬ್ದಾರಿಯನ್ನು ಜಿಲ್ಲಾಡಳಿತಕ್ಕೆ ನೀಡಲಾಗಿದೆ.

ಈ ಜಾಗೃತಿ ಜಾಥಾವು ಸ್ಥಳೀಯ ಜನ ಪ್ರತಿನಿಧಿಗಳ ಉಪಸ್ಥಿತಿಯೊಂದಿಗೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸಂಚರಿಸುತ್ತದೆ. 27 ದಿನಗಳಲ್ಲಿ ಈ ವಾಹನವು ಇಡೀ ಜಿಲ್ಲೆಯನ್ನು ಸಂಚರಿಸುತ್ತದೆ. ಒಂದು ವೇಳೆ ದೊಡ್ಡ ಜಿಲ್ಲೆಗಳಾಗಿದ್ದರೆ ಅಲ್ಲಿ ಎರಡು ಸ್ತಬ್ಧ ಚಿತ್ರ ಹಾಗೂ ವಾಹನದ ವ್ಯವಸ್ಥೆ ಮಾಡುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸುತ್ತದೆ.

ಈ ಜಾಥಾವು ಸಾಗುವ ಸಂದರ್ಭದಲ್ಲಿ ಆಯಾ ವ್ಯಾಪ್ತಿಯ ಸ್ಥಳೀಯ ಶಾಸಕರು/ಸಂಸದರು ಅಲ್ಲಿ ಭಾಗವಹಿಸಲಿದ್ದು, ಸರ್ಕಾರದ ಗ್ಯಾರಂಟಿ/ಇತರೆ ಸೌಲಭ್ಯಗಳು ದೊರಕದ ಜನರ ಸಂಕಷ್ಟಗಳನ್ನು ಅವರು ಆಲಿಸಿ ಪರಿಹಾರ ಒದಗಿಸುವ ಕೆಲಸ ಮಾಡಲಿದ್ದಾರೆ.

ಸಂವಿಧಾನ ಜಾಗೃತಿ ಜಾಥಾವು ಆ ದಿನ ಸಂಜೆ ಗ್ರಾಮೀಣ ಪ್ರದೇಶದ ಒಂದೆಡೆ ಉಳಿದುಕೊಳ್ಳಲಿದ್ದು, ಆ ಸಂದರ್ಭದಲ್ಲಿ ಸ್ಥಳೀಯ ಕಲಾ ಪ್ರಾಕಾರಗಳ ಸಹಾಯದಿಂದ ಸಂವಿಧಾನದ ಕುರಿತಂತೆ ಇನ್ನಷ್ಟು ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಮಾಡಲಾಗುತ್ತದೆ. ಇದೇ ವೇಳೆ ಸಂವಿಧಾನಕ್ಕೆ ಸಂಬಂಧಿಸಿದ ಸ್ಪರ್ಧೆಗಳೂ ಸಹ ಇರುತ್ತವೆ.

ಈ ಜಾಗೃತಿ ಜಾಥಾಕ್ಕೆ ಜನವರಿ 26 ರಂದು ಧ್ವಜಾರೋಹಣದ ಬಳಿಕ ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರು ಚಾಲನೆ ನೀಡಿರುತ್ತಾರೆ. ಜಾಗೃತಿ ಜಾಥಾ ಚಲಿಸುವ ಮಾರ್ಗದ ಕುರಿತ ವಿವರಗಳನ್ನು ಇದಕ್ಕಾಗಿ ರಚಿಸಲಾಗುವ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಈ ಕಾರ್ಯಕ್ರಮದ ಎರಡನೆಯ ಭಾಗವಾಗಿ ಫೆಬ್ರುವರಿ 24 ಹಾಗೂ 25 ರಂದು ಶಿಕ್ಷಣ ತಜ್ಞರು ಹಾಗೂ ವಿಷಯ ತಜ್ಞರಿಂದ ಅರಮನೆ ಮೈದಾನದಲ್ಲಿ ಎರಡು ದಿನಗಳ ಕಾಲ ವಿಚಾರ ಸಂಕೀರ್ಣವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಮಾನತೆ, ಸಮಾಜವಾದ, ಸ್ವಾತಂತ್ರ್ಯ, ಭ್ರಾತೃತ್ವ, ಸಾಮಾಜಿಕ ನ್ಯಾಯ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕೀರ್ಣ ಜರುಗಲಿದೆ. ಇದರಲ್ಲಿ ನಮ್ಮ ರಾಜ್ಯ, ಹೊರ ರಾಜ್ಯ ಹಾಗೂ ಹೊರ ದೇಶಗಳಿಂದ ವಿಷಯ ತಜ್ಞರು ಭಾಗವಹಿಸಲಿದ್ದಾರೆ.

ವಲಯ ಉದ್ಯಮಗಳು, ಸರ್ಕಾರೇತರ ಸಂಸ್ಥೆಗಳು ಇತ್ಯಾದಿಗಳ ಸಹಯೋಗವನ್ನು ಪಡೆದಿದೆ. ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಈ ಎಲ್ಲಾ ಇಲಾಖೆಗಳು ಭರಿಸಲಿದ್ದು, ರಾಜ್ಯದ ಸಾರ್ವಜನಿಕ ವಲಯ ಉದ್ಯಮಗಳು, ಸರ್ಕಾರೇತರ ಹಾಗೂ ಇತರೆ ಸಂಸ್ಥೆಗಳು ಕೂಡಾ ಕೈಜೋಡಿಸಲಿವೆ. ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ರೂ. 18 ಕೋಟಿಗಳಿಗೆ ಅನುಮೋದನೆ ದೊರೆತಿದ್ದು ಪ್ರತಿ ಜಿಲ್ಲೆಗೆ 25 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ.

ಈ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರ 25 ತಂಡಗಳನ್ನು ರಚಿಸಲಾಗಿದ್ದು ಇದರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸೆಪ್ಟಂಬರ್ 15, 2023 ರ ವಿಶ್ವ ಪ್ರಜಾಪ್ರಭುತ್ವ ದಿನದಂದು ಜರುಗಿದ "ಜಾಗತಿಕ ಸಂವಿಧಾನ ಪೀಠಿಕೆಯನ್ನು ಓದುವ" ಕಾರ್ಯಕ್ರಮದ ಮುಂದುವರಿದ ಭಾಗವಾಗಿ ಈ ಕಾರ್ಯಕ್ರಮವು ಜರುಗುತ್ತಿದ್ದು ತಳಮಟ್ಟದಲ್ಲಿ ಸಂವಿಧಾನದ ಮಹತ್ವದ ಕುರಿತಂತೆ ಅರಿವು ಮೂಡಿಸುವ ಮಹತ್ತರವಾದ ಉದ್ದೇಶವನ್ನು ಒಳಗೊಂಡಿದೆ. ಇಂತಹ ಮಹತ್ವದ ಕಾರ್ಯಕ್ರಮಕ್ಕೆ ಆಗಮಿಸಿ ಅತಿ ಹೆಚ್ಚಿನ ಪ್ರಚಾರವನ್ನು ನೀಡಬೇಕೆಂದು ನಾವು ಮಾಧ್ಯಮದ ಸ್ನೇಹಿತರಲ್ಲಿ ವಿನಂತಿಸುತ್ತೇವೆ.

ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿವರಗಳು **https://constitutionofindia-karnataka.in/**. ವೆಬ್ ಸೈಟ್ ನಲ್ಲಿ ಲಭ್ಯ ಇರುತ್ತವೆ. ಇದರ ಜೊತೆಗೆ ಇಪ್ಪತ್ನಾಲ್ಕು ಗಂಟೆಗಳ ಕಾಲ, **+918951305414** ಹಾಗೂ **+919482300400** ಸಂಖ್ಯೆಯ ಸಹಾಯವಾಣಿಯಲ್ಲಿ ಕರೆ/ವಾಟ್ಸಾಪ್/ಟೆಲಿಗ್ರಾಮ್ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಟ್ವಿಟರ್ ಖಾತೆ **@ConstitutionGoK** ಇಲ್ಲಿ ಕೂಡಾ ಮಾಹಿತಿಯನ್ನು ಪಡೆಯಬಹುದಾಗಿದೆ.

# "Constitution and National Unity"

**'Constitution Awareness Jatha'** is being celebrated throughout the state from 26th January 2024 to 23rd February 2024, making it the biggest festival of democracy. The **'Constitution Round Table'** will be held on 24th and 25th February 2024.

## Why is this programme?

The Constitution of India is the basis for everything in our country. Indian constitution was adopted on 26 November 1949 by the Constituent Assembly of India after painstaking effort of father of the Indian Constitution and the chairman of the drafting Committee, Dr B R Ambedkar.

The draft Indian Constitution was well crafted after a thorough debate in the constituent assembly to reflect the diversity of Indian culture, ethos, and social fabric.

The essence of the Indian Constitution is treasured its preamble. It states that India is essentially constituted on the pillars of great values viz., Sovereign, Socialist, Secular, democratic republic and it calls for ensuring social, economic, and political justice to its citizen, people enjoy liberty of thoughts, expression, belief, faith, and worship of their own deity.

It is the duty of the Governments (Central and State, Province) in Power to ensure justice, liberty, dignity, unity, integrity, and equality and promote fraternity among the citizens.

As we enter the 75th year of adoption of the Constitution, it is a good milestone to look at how the Constitution has performed and what are the challenges that lie ahead.

The Hon'ble MLA/MLC and MPs have been requested to participate in the Jatha in their respective jurisdictions. During the Jatha, the officials will also verify those citizens who are not covered in the Guarantee programmes and who could be otherwise eligible.

The Jatha will have local halts, where cultural troupes will perform and there will be participation from the college students, workers, farmers, SHGs etc. There will also be on the spot competitions on the Constitutions.

The jatha will be flagged off by the District Incharge Ministers on 26th January. It would be just after the hoisting of the National Flag. The details of the jatha and the route maps will be available in the website created especially for this purpose that will be available from tomorrow.

The second part of the programme is a Round-table, intellectual discourse and discussion by experts on many facets of the constitution. It will be done at Palace grounds location on 24th and 25th February.

This intellectual discourse will be on topics like the concept of Equality, liberty, Secularism, Social justice etc. The participants would be from the state, the country and few from outside India too. At the end of the round table, a declaration will be drafted based on the discussions.

This is jointly organised and curated by the National Law School of India University (NLSIU), Institute of Social and Economic Change (ISEC), and Karnataka Law University. These institutions would be collaborating with other institutions and NGOs in organising the round table. The details will be published in the website from 1st February, 2024.

The third part is a large convention on Constitution awareness at the Palace grounds (Krishna Vihar) where public from all walks of life

Regarding the programme more details are available at website from TOMORROW: link **https://constitutionofindia-karnataka.in/.** Also, 24x7 helplines are being set up and will be available at : +91 8951305414 and +91 94823 00400. (Whatsapp/Telegram/Voice calls). The Twitter Handle would be: **@ConstitutionGoK.**